**<u>ದಿನಾಂಕ: 20.01.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ಎಸ್ ಹೆಚ್ ಎಸ್ ವಕೀಲರಿಂದಃ</u>**

1. ನಾನು ಮನೆಕೆಲಸ ಮಾಡುತ್ತೇನೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಗಂಡ ವಾಸವಾಗಿರುತ್ತೇವೆ. ನಾನು ಮತ್ತು ನನ್ನ ಗಂಡ ಕೂಡಿಯೇ ಅನ್ಯೋನ್ಯವಾಗಿದ್ದೇವೆ. ಈ ದಿನ ನ್ಯಾಯಾಲಯಕ್ಕೆ ನನ್ನ ಗಂಡನೇ ನನ್ನನ್ನು ಬೈಕ್ ನಲ್ಲಿ ಕರೆದುಕೊಂಡು ಬಂದಿರುತ್ತಾನೆ. ನನ್ನ ಗಂಡನ ಹೆಸರು ವೀಭದ್ರಗೌಡ ರುದ್ರಗೌಡ ಮತ್ತಳ್ಳೇರ ಆಗಿರುತ್ತಾರೆ. ಈ ಕೇಸಿನಲ್ಲಿ ನನ್ನ ಗಂಡ ನನಗೆ ಜಾಮೀನು ಕೊಟ್ಟು ಬಿಡಿಸಿಕೊಂಡು ಹೋಗಿರುತ್ತಾರೆ. ಈಗ ತೋರುತ್ತಿರುವ ಜಾಮೀನುದಾರರಿಗೆ ಪ್ರಮಾಣ ಪತ್ರದಲ್ಲಿ ಪೋಟೋ ನನ್ನ ಗಂಡನದ್ದಾಗಿರುತ್ತದೆ. ಆದರೆ ಆ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನ ಗಂಡನದ್ದಾಗಿರುವುದಿಲ್ಲ. ಅದೇ ರೀತಿ ಆ ಜಾಮೀನಿನ ಆಧಾರದ ಮೇಲೆ ಬರೆಯಲಾದ ಬಾಂಡ್ ಮೇಲೆ ನನ್ನ ಜೊತೆ ಬೇರೆ ಯಾರೂ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆ ಜಾಮೀನು ಪ್ರಮಾಣ ಪತ್ರಕ್ಕೆ ನನ್ನ ಗಂಡ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಜಾಮೀನುದಾರಿಗೆ ಪ್ರಮಾಣ ಪತ್ರದಲ್ಲಿ ಸಹಿ ಹಾಗೂ ನಿಪಿ–5 ರಂತಹ ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಎರಡು ಒಂದೇ ರೀತಿಯಾಗಿರುತ್ತವೆ ಎಂದರೆ ಸರಿಯಲ್ಲ. ಆ ಎರಡು ಸಹಿಗಳು ಒಂದೇ ಆಗಿದ್ದರೂ ಸಹ ಅವುಗಳು ಒಂದೇ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದೂರುದಾರರ

ಪರ ವಕೀಲರು ಕಳುಹಿಸಿಕೊಟ್ಟ ಕಾನೂನು ಬದ್ದ ನೋಟಿಸು ನನ್ನ ವಿಳಾಸಕ್ಕೆ ಬಂದಿದ್ದು ಅದನ್ನು ನನ್ನ ಗಂಡ ಸ್ವೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಡಿ–2 ಮತ್ತು 3 ನನ್ನ ಬಳಿ ಹೇಗೆ ಬಂದವು ಎಂಬುದು ನನಗೆ ಗೊತ್ತಿಲ್ಲ. ಆ ದಾಖಲೆಗಳು ನಮ್ಮ ವಕಿಲರಿಗೆ ಯಾರು ಕೊಟ್ಟರು ಎಂಬುದು ನನಗೆ ಗೊತ್ತಿಲ್ಲ. ಅವುಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ನನ್ನ ಪರ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೇನೆಂದು ನನಗೆ ಗೊತ್ತಿಲ್ಲ. ನಾನು ದೂರುದಾರರ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಮತ್ತು ಆತನನ್ನು ನಾನು ನೋಡಿರುವುದಿಲ್ಲ. ನಾನು ಆತ ನ್ಯಾಯಾಲಯಕ್ಕೆ ಬಂದ ಸಂದರ್ಭದಲ್ಲಿ ಮಾತ್ರ ನೋಡಿರುತ್ತೇನೆ ನನ್ನ ಗಂಡ ವ್ಯವಸಾಯ ಮತ್ತು ತೋಟದ ವ್ಯವಹಾರ ಮಾಡುತ್ತಾರೆ. ನನ್ನ ಗಂಡ ಯಾವ ಬ್ಯಾಂಕ್ ನಲ್ಲಿ ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಗದ್ದೆ ಕೆಲಸವನ್ನು ಬಿಟ್ಟು ಬೇರೆ ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ನನಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಕ್ಕಳಿದ್ದು ಅವರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ನನ್ನ ಮಕ್ಕಳ ಮದುವೆಯ ಸಂಬಂಧ ಬಂಗಾರದ ಒಡವೆಗಳನ್ನು ಮಾಡಿಸಲು ಪಿರ್ಯಾದಿಯ ಬಳಿ ನನ್ನ ಗಂಡನ ಜೊತೆ ನನ್ನ ಸೊಸೆ ಹೋಗಿದ್ದರು. ಯಾವ ದಿನಾಂಕ ಮತ್ತು ಎಷ್ಟು ಸಾರಿ ಹೋಗಿದ್ದರು ಎಂಬುದು ನನಗೆ ಗೊತ್ತಿಲ್ಲ. ದೂರುದಾರರ ಜೊತೆ ಎಷ್ಟು ವ್ಯವಹಾರಗಳನ್ನು ಮಾಡಿದ್ದೇವೆ ಎಂಬುದು ನನಗೆ ಗೊತ್ತಿಲ್ಲ. ನಾನು ದೂರುದಾರರಿಂದ ರೂ.4 ಲಕ್ಷ ಬೆಲೆಗೆ ಬಂಗಾರದ ಒಡವೆಗಳನ್ನು ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿಯು ಆ ಒಡವೆಗಳ ಹಣವನ್ನು ಸಂಪೂರ್ಣವಾಗಿ ವಾಪಸ್ಸು ಮಾಡಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಆ ಹಣವನ್ನು ಯಾವ ದಿನಾಂಕದಂದು ವಾಪಸ್ಸು ಕೊಟ್ಟೇವು ಎಂದು ಈಗ ಹೇಳಲಾಗುವುದಿಲ್ಲ. ಆ 4 ಲಕ್ಷ ಹಣದ ಪೈಕಿ ರೂ. 2 ಲಕ್ಷದ 2 ಸಾವಿರ ರೂ.ಗಳನ್ನು ವಾಪಸ್ಸು ಕೊಟ್ಟು ಇನ್ನೂ ಸಹ ರೂ.1 ಲಕ್ಷ 98 ಸಾವಿರಗಳನ್ನು ಬಾಕಿ ಉಳಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಹಣವನ್ನು ದೂರುದಾರರು ಜೂನ್ 2024 ರಂದು ವಾಪಸ್ಸು ಕೊಡುವಂತೆ ಕೇಳಲಾಗಿ ನಾನು ನನ್ನ ಖಾತೆ ಇರುವ ಚೆಕ್ ನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.ಆ ಚೆಕ್ ನ್ನು ದೂರುದಾರರ ನಗದೀಕರಣಕ್ಕಾಗಿ ಹಾಜರು ಪಡಿಸಲಾಗಿ ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ದೂರುದಾರರಿಗೆ ಚೆಕ್ ನೀಡಿ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆನಂದ ಎಂಬ ವ್ಯಕ್ತಿ ಕುಪಗಡ್ಡಿ

ಗ್ರಾಮದವರಾಗಿರುತ್ತಾರೆ. ಆ ಗ್ರಾಮ ಸೊರಬ ತಾಲೂಕಿನ ವ್ಯಾಪ್ತಿಯೊಳಗೆ ಬರುತ್ತದೆ. ದೂರುದಾರರು ಅಕ್ಕಿ ಆಲೂರಿನಲ್ಲಿ ಮಾಡಿರುವ ಸೊಸೈಯಿಟಿಗೆ ಆನಂದ ರವರು ಸದಸ್ಯರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದೂರುದಾರರ ಸೊಸೈಯಿಟಿ ವತಿಯಿಂದ ಸದಸ್ಯರಾದವರು ಮತ್ತು ಹಾನಗಲ್ ವ್ಯಾಪ್ತಿಯಲ್ಲಿ ವಾಸಿಸುವವರಿಗೆ ಮಾತ್ರ ಸಾಲ ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದೂರುದಾರರಿಗೆ ಸಂಬಂಧಪಟ್ಟ ಪ್ರಭಾಕರ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಸಂಸ್ಥೆಯಲ್ಲಿ ಆ ಆನಂದ ರವರಿಗೆ ಸಂಬಂಧಪಟ್ಟ ಯಾವುದೇ ವ್ಯವಹಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ದೂರುದಾರರಿಂದ ಮಾಡಿಸಿಕೊಂಡ ಬಂಗಾರದ ಒಡವೆಯ ಬಾಕಿ ಹಣ ಕೊಡುವ ಸಂಬಂಧ ಚೆಕ್ ನೀಡಿ ಮೋಸ ಮಾರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಕೂಡಬೇಕಾಗಿರುವ ಹಣದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ॰ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್